

ರವಿ. ಎಂ. ಪೈ, ಹೊನ್ನಾವರ

*ಕುಡಿನೋಟಕ್ಕೂ, ಬಿರುನೋಟಕ್ಕೂ ಏನು ವ್ಯತ್ಯಾಸ?*



ಒಂದು ಆಕರ್ಷಕ ರಿಂಗ್‌ಟೋನ್, ಇನ್ನೊಂದು ಸೈರನ್!

ನವಿರವಿ, ಬಾಳೆಹೊನ್ನೂರು

*ನಾವು ಸತ್ತಮೇಲೆ ದೇಹ ಮಣ್ಣಿಗೆ. ಆತ್ಮ ಎಲ್ಲಿಗೆ?*

ನ್ಯೂ ಬಾಡಿ ಪ್ಲೇಸ್‌ಮೆಂಟ್ ಸೆಂಟರ್‌ನ ಕಚೇರಿಗೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಏನನ್ನಾದರೂ ಎಣಿಸುವಾಗ ಬೆರಳಿನಿಂದ ಎಂಜಲು ಮುಟ್ಟಿಕೊಳ್ಳುತ್ತಾರಲ್ಲಾ, ಇದಕ್ಕೆ ಏನಂತೀರ?*

ನಂಬರ್ ಒನ್ ಶ್ವಪಚ ಅಂತೀನಿ. ಅಸಂಸ್ಕೃತರ ಹೆಗ್ಗುರುತು ಇದು.

ಸಿದ್ಧಾರ್ಥ ಹೆಬ್ಬಾರ್, ಈದು

*ಮಾನವ ಒಳಗಾಗದಿರುವ ಆಮಿಷ ಯಾವುದು?*

ಯಾವುದೆಂದರೆ ಯಾವುದೂ ಇಲ್ಲ; ಇದೊಂದು ವಿಷಯದಲ್ಲಿ ಮಾನವ ಪರಿಪೂರ್ಣ.

ಮಹಾವೀರ ಕಾಸರ, ಶಿವಮೊಗ್ಗ

*ಬಡ್ಡಿಮಗ ಎಂದರೇನು?*




ಫೈನಾನ್ಷಿಯರ್‌ನ ಮಗ!

ಎಂ.ಜಿ. ಚಿನ್ನಪ್ಪಸ್ವಾಮಿ, ಭದ್ರಾವತಿ

*ಎರಡೂ ಕೈ ಕೆಸರಾದಾಗಲೇ ಮೂಗಿಗೆ ತುರಿಕೆ ಬರಲು ಕಾರಣವೇನು?*

ನಿಮ್ಮ ಸೃಜನಶೀಲತೆಯನ್ನು ಪರೀಕ್ಷಿಸಲು.

ಎಂ.ಎಸ್. ಸೋಮಶೇಖರ್, ಮೈಸೂರು

*ಉಡುಪಿ ಶ್ರೀಕೃಷ್ಣನಿಗೂ, ಇಸ್ಕಾನ್ ಶ್ರೀಕೃಷ್ಣನಿಗೂ ಏನು ವ್ಯತ್ಯಾಸ?*

ಉಡುಪಿಕೃಷ್ಣನಿಗೆ ಕನಕನ ಕಿಂಡಿ ಮುಖ್ಯ, ಇಸ್ಕಾನ್ ಕೃಷ್ಣನಿಗೆ ಕನಕದ ಹುಂಡಿ ಮುಖ್ಯ.

ಕೆ.ಹೆಚ್. ತೇಜೇಶ್ಚಂದ್ರ, ತುಮಕೂರು

*ಈಗಿನ ಸಾಮಾಜಿಕ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಲು ನಿಮ್ಮ ಸಲಹೆ ನೀಡಿ.*

ವ್ಯವಸ್ಥೆ ಪದಕ್ಕೆ 'ಸು' ಸೇರಿಸಿಬಿಟ್ಟರೆ ಸಾಕು; ಸು – ಸುಶಿಕ್ಷಣ, ಸುಜ್ಞಾನ, ಸುಶೀಲತೆ, ಸುಸಲ್ಲಾಪ, ಸುಭದ್ರತೆ!

ಚಿಕ್ಕೋಬನಹಳ್ಳಿ ಚಾಂದ್‌ಬಾಷ, ಚಿತ್ರದುರ್ಗ

*ನಗಿಸುವುದು, ನಗುವುದು, ಎರಡೂ ಕಮರ್ಷಿಯಲ್ ಆಗಿವೆಯಲ್ಲಾ...?*

ಮಕ್ಕಳೊಡನೆ ಆಟವಾಡಿ; ಕಾಸು ಖರ್ಚಿಲ್ಲದೆ ಹೊಟ್ಟೆ ತುಂಬ ನಗು, ಮನಸ್ಸಿನ ತುಂಬ ನೆಮ್ಮದಿ ದೊರೆಯುತ್ತದೆ.

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ಯುವತಿಯೊಬ್ಬಳು ಪ್ರತಿನಿತ್ಯ ಕೈನೆಟಿಕ್ ಹೋಂಡಾ ಸ್ಟಾರ್ಟ್ ಮಾಡಿ ನನ್ನನ್ನೇ ನೋಡುತ್ತಾ ಹಾರನ್ ಒತ್ತುತ್ತಾಳಲ್ಲಾ...?*

ಅಷ್ಟು ಮಾಡಿದರೂ ಇನ್ನೂ ತಿಳಿಯಲಿಲ್ಲವೇ? ಗೇಟಿನಿಂದ ಹೊರಕ್ಕೆ ಬರಲು ಜಾಗಬಿಟ್ಟು ನಿಲ್ಲಪ್ಪ ಎಮ್ಮೆತಮ್ಮಣ್ಣ!

ಎನ್.ಎಸ್. ಆನಂದ್, ಕತ್ತರಗುಪ್ಪ

*ಕೈತಪ್ಪು, ಬಾಯ್ತಪ್ಪು; ಯಾವುದರಿಂದ ಅಪಾಯ ಜಾಸ್ತಿ ರಾಂಜಿ?*

ದೇಶಾಡಳಿತದ ಲೆಕ್ಕದಲ್ಲಾದರೆ 'ಕೈ' ತಪ್ಪಿನಿಂದ; ಹುಡುಗಿಯ ಲೆಕ್ಕದಲ್ಲಾದರೆ boy ತಪ್ಪಿನಿಂದ!

ಅಮರಯ್ಯಾ ಪತ್ರಿಮಠ, ಸುರಪೂರ

*ಓದು ಒಕ್ಕಾಲು, ಬುದ್ಧಿ ಮುಕ್ಕಾಲು ಎಂಬ ಗಾದೆಯ ಮರ್ಮವೇನು ಗುರುವರ್ಯ?*

ಕಿಂಡರ್‌ಗಾರ್ಟನ್ ಓದದೇಯಿದ್ದೂ ಕಿಲಾಡಿತನಕ್ಕೇನ್ ಕಡಿಮೆಯಿಲ್ಲಾ ಅಂತ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ತೆಳುನಡುವಿನ, ಸುಂದರ ದಂತಪಂಕ್ತಿಗಳ ಚೆಲುವೆಯ ಸೌಂದರ್ಯದ ಗುಟ್ಟೇನು?*

ಡಯಟ್ಟು, ಡೆಂಟಿಸ್ಟು!

ಶಂಕರ್ ಬಿ. ಕಿಣಗಿ, ವಲ್ಲಂಗ್

*ಗಂಡ ಸತ್ತವಳು ವಿಧವೆ; ಹೆಂಡತಿ ಸತ್ತವನು ವಿದುರ; ವಿಚ್ಛೇದನಗೊಂಡವರು?*

ವಿದೂರ/ವಿದೂರೆ.

## ಬಹುಮಾನಿತ ಪ್ರಶ್ನೆ

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಸಿನಿಮಾದಲ್ಲಾಗಲಿ, ಸೀರಿಯಲ್‌ಗಳಲ್ಲಾಗಲಿ ಹೆಣ್ಣುದೆವ್ವಗಳನ್ನೇ ತೋರಿಸುತ್ತಾರೆ. ಯಾಕೆ ರಾಂಜಿ?*

ಬರ್ಮುಡಾ/ಪಂಚೆ ತೊಟ್ಟ ಗಂಡು ದೆವ್ವ 'ತಂಗಾಳಿಯಲ್ಲಿ ನಾನು ತೇಲಿ ಬಂದೆ...' ಎಂದರೆ ಮನುಷ್ಯರಿರಲಿ, ದೆವ್ವವೂ ನೋಡುವುದಿಲ್ಲ!

ಜಾಕೋಬ್ ಡಿಸೋಜ, ಕುರುವಳ್ಳಿ

*ಪೊಲೀಸ್ ಭಾಷೆ ಅಂತಾರಲ್ಲಾ, ಹಾಗಂದ್ರೆ ಏನು ಸಾರ್?*

ಸಭ್ಯರು ಇಂಗ್ಲಿಷ್‌ನಲ್ಲಿ ಸ್ವಗತದಲ್ಲಿ ನುಡಿಯುವ, ರೋಲ್‌ಕಾಲ್ ಮಾಧ್ಯಮಗಳು ಹೆಡ್‌ಲೈನ್‌ನಲ್ಲಿ ಬಳಸುವ 'ವಂಶೋದ್ಧಾರಕ' ಪದಗಳು.

ಎಸ್.ಜಿ. ಕರನಂದಿ, ಹುನಗುಂದ

*ಮಹಾಭಾರತಕ್ಕೂ, ಈಗಿನ ರಾಜಕೀಯಕ್ಕೂ ಏನು ವ್ಯತ್ಯಾಸವಿದೆ?*



ಆಗ ಶಂಖ ಊದುತ್ತಿದ್ದರು. ಈಗ ಶಂಖ ಹೊಡೆದುಕೊಳ್ಳುತ್ತಾರೆ.

ಡೈರಿ ವಿಶ್ವನಾಥ್, ಬೆಂಗಳೂರು

*ನಿರಾಶಾವಾದಿಗಳಿಗೆ ನಿಮ್ಮ ಸಲಹೆ?*

ರೋಗಿಗಳಿಗೆ ಸಾವಿನ ಭಯ ಹುಟ್ಟಿಸುವ ಸರ್ಜನ್ ಆಗಿ; ರೋಗಿ ಬದುಕಿದರೆ ಹಣ, ಕೀರ್ತಿ; ಹೆಣವಾದರೆ ಹಣ!

ಆರ್. ಮಧುಸೂದನ್, ಹಾಸನ

*ಮಹಿಳೆಯರೇಕೆ ವ್ಯಂಗ್ಯಚಿತ್ರ ಬರೆಯುವುದಿಲ್ಲ?*

ವಕ್ರ ಕಂಡಾಗಲೆಲ್ಲ ಮೇಕಪ್ ಮಾಡಿ ಸರಿಪಡಿಸಿಬಿಡಬೇಕೆನ್ನುವ ಬುದ್ಧಿ ಇರುವುದರಿಂದ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಒಂದೊಮ್ಮೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗದೇಹೋಗಿದ್ರೆ ಏನಾಗ್ತಿತ್ತು?*

ಇಂಡಿಯಾ–ಪಾಕಿಸ್ತಾನ್ ಕ್ರಿಕೆಟ್ ಮ್ಯಾಚ್ ಮಜಾನೇ ತಪ್ಪೋಗ್ತಿತ್ತು!

■ ರಾಮ್